

ಹಾಸನದ ಸುಭಾಷ್ ಸ್ಕ್ವೇರ್‌ನ ಜನನಿಬಿಡ ಅಂಗಡಿಗಳ ನಡುವೆ ಹೇಗೋ ಒಂದಿಷ್ಟು ಅನುವು ಮಾಡಿಕೊಂಡು ತಳ್ಳುಗಾಡಿಯಲ್ಲಿ ಹಣ್ಣನ್ನು ಮಾರುತ್ತಿದ್ದ ಖಲಂದರ್ ಉಸ್ಸಪ್ಪ ಎಂದು ಏದುಸಿರು ಬಿಡುತ್ತಿದ್ದ. ಅವನ ಮೊಮ್ಮಗ ತನ್ನ ಶಾಲೆಯ ಬುಕ್ಕಿನಲ್ಲಿ ಸೂರ್ಯನ ಚಿತ್ರವನ್ನು ಬರೆಯುವುದಿತ್ತು. ದುಂಡನೆಯ ಸೂರ್ಯನ ಮುಖದಲ್ಲಿ ಒಮ್ಮೊಮ್ಮೆ ಅಗಲ ಕಣ್ಣುಗಳು ಮತ್ತು ನಗೆಬೀರಿದ ತುಟಿಗಳು ಇರುತ್ತಿದ್ದವು. ಇನ್ನು ಒಂದೊಂದು ಸಲ ದುಂಡನೆಯ ಮೋರೆಯಲ್ಲಿ ಕಣ್ಣುಗಳು ಕೂಡಿಕೊಂಡು, ಮೋರೆಯ ಸುತ್ತ ಜ್ವಾಲೆಗಳು ಏರುತ್ತಾ ಬಿಗಿದ ತುಟಿಗಳನ್ನು ನೋಡಿದರೆ ಸಾಕು ಸೂರ್ಯ ಉರಿ ಉರಿ ಉರಿಯುತ್ತಿದ್ದಾನೆ ಎಂದು ಅರ್ಥವಾಗುತ್ತಿತ್ತು. ಅವನು ಹುಟ್ಟಿ ಬೆಳೆದದ್ದು ಹಾಸನದಲ್ಲಿ; ಅರೆಮಲೆನಾಡು ಮತ್ತು ಅರೆಮೈದಾನ ಎಂದು ಹಾಸನ ನಗರವನ್ನು ಮಧ್ಯಭಾಗದಿಂದ ಕೇಕ್ ಕತ್ತರಿಸಿದಂತೆ ರೆವಿನ್ಯೂ ಕಡತಗಳಿಗಾಗಿ ವಿಭಾಗಿಸಿದ್ದರು ಕೂಡ. ಅವನು ಎಂದಿನಿಂದಲೂ ಹಾಸನ ನಗರದಲ್ಲಿ ಎಳೆ ಸೂರ್ಯನ ನಗು ಮುಖವನ್ನು ನೋಡಿಕೊಂಡೇ ಬೆಳೆದವನು. ಆ ಸನ್ನಿವೇಶ ರಾಜಕೀಯಕ್ಕೆ ಕೂಡ ಅನ್ವಯವಾಗುತ್ತಿತ್ತು. ಹಾಸನದ ರಾಜಕೀಯ ಕೂಡ ಎಂದಿನಿಂದಲೂ ಪ್ರಶಾಂತ ಮೋರೆಯ, ನಗುಮುಖದ, ಸುಡುವಂತಹ ತೀಕ್ಷ್ಣ ಕಿರಣಗಳಿಲ್ಲದ ಜನಸ್ನೇಹಿ ಸೂರ್ಯನಂತೆ ನಡೆದುಕೊಂಡು ಬಂದಿತ್ತು.

ಕಾಲ ಹಿಂದಿನಂತೆಯೇ ಇರುವುದಿಲ್ಲ; ಪಲ್ಲಟಗಳು ಸಂಭವಿಸುತ್ತವೆ. ಅದರ ಅರ್ಥ ಕಾಲ ಕೆಟ್ಟುಹೋಗಿದೆ ಅನ್ನೋದು ಅಲ್ಲ. ಬದಲಿಗೆ ಕಾಲ ಬದಲಾವಣೆಯಾಗುತ್ತಿದೆ ಮತ್ತು ತನ್ನದೇ ಆದ ಓಘದಲ್ಲಿ ಓಡುತ್ತಿದೆ ಎಂದು ಅರ್ಥ. ಕಾಲಚಕ್ರದ ಬೀಸು ಹಾದಿಯಲ್ಲಿ ಪುಡಿ ಪುಡಿಯಾದವರೆಷ್ಟು ಮಂದಿ. ಖಲಂದರ್‌ಗೆ ಕೂಡ ತನ್ನ ಕಾಲದಲ್ಲಿ ಎಸ್‌ಎಸ್‌ಎಲ್‌ಸಿ ಮುಗಿಸಿದ ಕೂಡಲೇ ಸರ್ವೆ ಇಲಾಖೆಯಲ್ಲಿ ಸರ್ವೆಯರ್ ಸಹಾಯಕನಾಗಿ ಕೆಲಸ ದೊರಕಿತ್ತು. ಉತ್ಸಾಹದಿಂದ ಸರ್ಕಾರಿ ಕೆಲಸಕ್ಕೆಂದು ಒಮ್ಮೆ ಹೋದವನು ಗುಲಬರ್ಗಾದ ಬಿಸಿಲಿನ ಝಳವನ್ನು ಕಂಡು ಓಡಿ ಬಂದವನು ಮತ್ತೆ ಆ ಕಡೆ ತಲೆ ಹಾಕಲಿಲ್ಲ. ನಗರದಲ್ಲಿ ತಳ್ಳುಗಾಡಿಯಲ್ಲಿ ಹಣ್ಣಿನ ವ್ಯಾಪಾರವನ್ನು